**ದಿನಾಂಕಃ 02–06–2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಶ್ರೀ ಎಂ ಎಲ್ ಎನ್ ವಕೀಲರಿಂದ ಎದುರುದಾರರ ಪರವಾಗಿಃ**

3. ಭವಾನಿ ಶಂಕರ ರಾಮರಾವ್ ಕಾರ್ಕಳ ನನ್ನ ಅಜ್ಜ . ನನ್ನ ಅಜ್ಜನಿಗೆ ಮೂರು ಜನ ಮಕ್ಕಳು ಎಂದರೆ ಐದು ಜನ ಗಂಡು ಮಕ್ಕಳು ಮೂರು ಜನ ಹೆಣ್ಣು ಮಕ್ಕಳು ಎಂದು ನುಡಿಯುವರು . ಅವರು ರಾಮದಾಸ, ಕೃಷ್ಣಾ ಮತ್ತು ಅರುಣ್ ಎಂದರೆ ಹೌದು . ರಾಮದಾಸ ನನ್ನ ತಂದೆ ಎಂದರೆ ಹೌದು . ಎದುರುದಾರ ನನ್ನ ಚಿಕ್ಕಪ್ಪ ಎಂದರೆ ಹೌದು . ಅವರು ವೈದ್ಯರು ಎಂದರೆ ಹೌದು . ನಾನು ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿದ್ದೇನೆ ಮತ್ತು ಡಿಪ್ಲೋಮಾ ಫಾರ್ಮಸಿ ಮಾಡಿದ್ದೇನೆ . ನಾನು ಹೊನ್ನಾವರದಲ್ಲಿ ಹುಟ್ಟಿದ್ದೇನೆ ಎಂದರೆ ಸರಿಯಲ್ಲ ಮುಂಬೈನಲ್ಲಿ ಹುಟ್ಟಿರುತ್ತೇನೆ. ನಾನು 1995 ರವರೆಗೆ ಹೊನ್ನಾವರದಲ್ಲಿ ವಾಸ ಇದ್ದೆ . ನಾನು ಹುಟ್ಟಿದ್ದು ಮಾತ್ರ ಮುಂಬೈನಲ್ಲಿ ಆದರೆ ಬೆಳೆದಿದ್ದು ಹೊನ್ನಾವರದಲ್ಲಿ ಆಗಿರುತ್ತದೆ . 1995 ರ ಜೂನ್ ನಂತರ ನಾನು ಶಿರಸಿಗೆ ಹೋಗಿ ವಾಸ್ತವ್ಯ ಇದ್ದೆ . ಅಲ್ಲಿ ಒಂದುವರೆ ವರ್ಷ ಇದ್ದೆ . ಅಲ್ಲಿಂದ ನಾನು 1997 ರಿಂದ ಒಂದು ಮುಕ್ಕಾಲು ವರ್ಷ ಪೂಣಾದಲ್ಲಿ ಹೋಗಿ ಇದ್ದೆ . ನಂತರ ನಾನು ಸುಮಾರು ಒಂದು ವರ್ಷ ಮುಂಬೈನಲ್ಲಿ ನನ್ನ ಚಿಕ್ಕಪ್ಪನ ಮನೆಯಲ್ಲಿ ಇದ್ದೆ . ಅಲ್ಲಿಂದ ನಾನು ಸೌದಿ ಅರೆಬಿಯಾಗೆ ಹೋದೆ . ಅಲ್ಲಿ 7 ವರ್ಷ ಇದ್ದೆ. 1999 ರಿಂದ 2006 ರವರೆಗೆ ನಾನು ಸೌದಿ ಅರೆಬಿಯಾದಲ್ಲಿ ಇದ್ದೆ. ನಾನು 2006 ರಿಂದ 2021 ರವರೆಗೆ ದುಬೈನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಸೌದಿ ಅರೆಬಿಯಾದಲ್ಲಿ ಕೆಲಸ ಮಾಡುವಾಗ ಹೊನ್ನಾವರಕ್ಕೆ ಒಂದು ಬಾರಿ ಮಾತ್ರ 2003 ರಲ್ಲಿ ಬಂದಿದ್ದೆ. ಶಿರಸಿಯಲ್ಲಿ ನಾನು ಬಾಡಿಗೆ ಮನೆಯಲ್ಲಿ ಇದ್ದೆ. ನಾನು ಅಲ್ಲಿ ಸಹ್ಯಾದ್ರಿ ಕಾಲನಿ ಕುರ್ಸೆ ಕಂಪೌಂಡ್ ನಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದೆ.

4. ನನ್ನ ಚಿಕ್ಕಪ್ಪ ಅಂದರೆ ಎದುರುದಾರ ನನ್ನ ವಿರುದ್ಧ ಕಾರವಾರದ ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಮೂಲ ದಾವಾ ಸಂ. 7/1997 ಅನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಹೊನ್ನಾವರದಲ್ಲಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ ಸ್ಥಾಪನೆಯಾದ ಮೇಲೆ ಆ ದಾವೆ ಆ ನ್ಯಾಯಾಲಯಕ್ಕೆ ವರ್ಗಾವಣೆಯಾಗಿ ಅಸಲು ದಾವೆ ಸಂ. 32/2001 ಎಂದು ನೋಂದಾವಣೆಯಾಯಿತು ಎಂದರೆ ನನಗೆ ಗೊತ್ತಿಲ್ಲ. ನಾನು ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತೇನೆ ಎಂದರೆ ಹೌದು . ನನ್ನ ಸಹಿ ಕೆಳಗೆ ನಾನು ಸನತ್ ರಾಮದಾಸ ಕಾರ್ಕಳ ಎಂದು ಬರೆಯುತ್ತೇನೆ

ಎಂದರೆ ಕೆಲವೊಮ್ಮೆ ಬರೆಯುತ್ತೇನೆ ಕೆಲವೊಮ್ಮೆ ಬರೆಯುವುದಿಲ್ಲ. ಅಸಲು ದಾವೆ ಸಂ. 7/1997 ರಲ್ಲಿ ನಾನು ದಿನಾಂಕ 21.02.1997 ರಲ್ಲಿ ಸಮನ್ಸ್ ಸ್ವೀಕರಿಸಿದ್ದೇನೆ ಎಂದರೆ ಸರಿಯಲ್ಲ. ಆ ಕೇಸಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳ ದೃಢೀಕೃತ ನಕಲುಗಳನ್ನು ಪಡೆದಿದ್ದೇನೆ ಎಂದರೆ ಎಷ್ಟು ಸಿಕ್ಕಿದೆಯೋ ಅಷ್ಟು ಪಡೆದಿದ್ದೇನೆ. ನಾನು ಪಡೆದ ಎಲ್ಲಾ ದಾಖಲಾತಿಗಳನ್ನು ಈ ಕೇಸಿನಲ್ಲಿ ಹಾಜರುಪಡಿಸಿಲ್ಲ ಎಂದರೆ ನಾನು ಅದನ್ನು ಪರಿಶೀಲಿಸಬೇಕು. ನಾನು ಹೊನ್ನಾವರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಈ ಎಲ್ಲಾ ದಾಖಲಾತಿಗಳ ದೃಢೀಕೃತ ನಕಲುಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಹೌದು . ಈಗ ತೋರಿಸಿದ ಅಸಲು ದಾವೆ 7/1997 ರ ಸಮನ್ಸ್ ಅನ್ನು ನಾನು ದಿನಾಂಕ 21.02.1997 ರಲ್ಲಿ ರುಜು ಮಾಡಿ ತೆಗೆದುಕೊಂಡಿದ್ದೇನೆ ಎಂದರೆ ನಾನು ತೆಗೆದುಕೊಂಡಿಲ್ಲ (ಸಾಕ್ಷಿಗೆ ದೃಢೀಕೃತ ನಕಲನ್ನು ಎದುರು ಮಾಡಲಾಗಿದೆ ). ಎದುರು ಮಾಡಿದ ದಾಖಲಾತಿ ಯಾವುದು ಎಂಬ ಬಗ್ಗೆ ಅದನ್ನು ನಿಶಾನೆ ಆರ್-1 ಎಂದು ಗುರುತಿಸಲಾಗಿದೆ. ಆ ಸಮನ್ಸ್ ಜಾರಿ ಆದ ಮೇಲೆ ನಾನು ದಿನಾಂಕ 07.04.1997 ರಂದು ಎಂ ಆರ್ ಅಡಿ  ವಕೀಲರನ್ನು ನನ್ನ ಪರ ನೇಮಕ ಮಾಡಿಕೊಂಡು ಆ ದಾವೆಯಲ್ಲಿ ಕಾರವಾರದ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಹಾಜರಾಗಿದ್ದೆ ಎಂದರೆ ಸರಿಯಲ್ಲ. ಈ ಕೇಸಿನ ಪೂರ್ಣ ಆದೇಶ ಹಾಳೆಯ ದೃಢೀಕೃತ ನಕಲನ್ನು ನಾನು ಪಡೆದಿದ್ದೇನೆ ಎಂದರೆ ಎಲ್ಲಾ ಎಂದು ಹೇಳಲು ಆಗುವುದಿಲ್ಲ ಎಷ್ಟು ಸಿಕ್ಕಿದೆಯೋ ಅಷ್ಟು ತೆಗೆದುಕೊಂಡಿದ್ದೇನೆ. ನಾನೇ ಈ ಮೇಲ್ಮನವಿಯಲ್ಲಿ ಆ ದಾಖಲಾತಿಗಳನ್ನು ಹಾಜರುಪಡಿಸಿದ್ದರೂ ಅವುಗಳನ್ನು ನಾನು ನನ್ನ ಪರ ನಿಶಾನೆ ಮಾಡಿಕೊಂಡಿಲ್ಲ ಎಂದರೆ ನಾನು ಉದ್ದೇಶ ಪೂರ್ವಕವಾಗಿ ಆ ರೀತಿ ಮಾಡಿಲ್ಲ. ಆ ದಾಖಲಾತಿಗಳನ್ನು ಎದುರುದಾರನ ಪರ ನಿಶಾನೆ ಮಾಡಿಕೊಳ್ಳಲು ನನ್ನ ತಕರಾರು ಇದೆಯಾ ಎಂದರೆ ನನ್ನ ವಕೀಲರನ್ನು ಆ ಬಗ್ಗೆ ಕೇಳಬೇಕು. ನಾನು ಹಾಜರುಪಡಿಸಿರುವ ಅಸಲು ದಾವೆ 7/1997 ರ ಆದೇಶ ಹಾಳೆಯ ದೃಡೀಕೃತ ನಕಲನ್ನು ಈಗಲಾದರೂ ನಾನು ನನ್ನ ಪರ ನಿಶಾನೆ ಮಾಡಿಕೊಳ್ಳುತ್ತೇನಾ ಎಂದರೆ ನಾನು ಆ ದಾಖಲಾತಿಗಳು ಏನು ಎಂದು ನೋಡಬೇಕು . ಈಗ ತೋರಿಸಿದ ಅಸಲು ದಾವೆ 7/1997 ರ ಆದೇಶ ಹಾಳೆಯ ದೃಢೀಕೃತ ನಕಲನ್ನು ನಾನೇ ಈ ಮೇಲ್ಮನವಿಯಲ್ಲಿ ದಾಖಲಾತಿ ಪಟ್ಟಿ ಜೊತೆ ಸಲ್ಲಿಸಿದ್ದೇನೆ ಎಂದರೆ ಹೌದು . ಅದನ್ನು ಎದುರುದಾರರ ಪರವಾಗಿ ನಿ.ಆರ್.2 ಎಂದು ಗುರುತಿಸಲಾಯಿತು. ಅದರಲ್ಲಿ ದಿನಾಂಕ 07.04.1997 ರಂದು ನಾನು ಎಂ ಆರ್ ಅಡಿ ವಕೀಲರ ಮೂಲಕ ಆ ದಾವೆಯಲ್ಲಿ ಹಾಜರಾಗಿರುವುದಾಗಿ ನಮೂದಾಗಿದೆ ಎಂದರೆ ನಾನು ಆ

ಪ್ರಕರಣದಲ್ಲಿ ಎಂ ಆರ್ ಅಡಿ ವಕೀಲರನ್ನು ನೇಮಕ ಮಾಡಿಕೊಂಡಿಲ್ಲ. ಆ ದಿನ ಆದೇಶ ಹಾಳೆಯಲ್ಲಿ ನನಗೆ ಸಮನ್ಸ್ ವೈಯಕ್ತಿಕವಾಗಿ ಜಾರಿಯಾಗಿದೆ ಎಂದು ದಾಖಲಾಗಿದೆ ಎಂದರೆ ನಾನು ಅದನ್ನು ಒಪ್ಪುವುದಿಲ್ಲ. ಈ ಕೇಸಿನಲ್ಲಿ ಮಧ್ಯಂತರ ಅರ್ಜಿ 1 ಕ್ಕೆ ಸಲ್ಲಿಸಿರುವ ತಕರಾರಿನಲ್ಲಿ ಎದುರುದಾರ ನಾನು ಅಸಲು ದಾವೆ 7/1997 ರಲ್ಲಿ ಯಾವ ದಿನಾಂಕದಂದು ಹಾಜರಾಗಿದ್ದೇನೆ ಎಂದು ಹೇಳಿದ್ದಾರೆ ಎಂದರೆ ನಾನು ಅದನ್ನು ವಿಚಾರಿಸಿ ತಿಳಿದುಕೊಂಡಿಲ್ಲ. ಕಾರವಾರದ ನ್ಯಾಯಾಲಯದಿಂದ ಹೊನ್ನಾವರ ನ್ಯಾಯಾಲಯಕ್ಕೆ ದಾವೆ ವರ್ಗಾವಣೆಯಾದ ಮೇಲೆ ಹೊನ್ನಾವರ ನ್ಯಾಯಾಲಯದಿಂದ ನನಗೆ ಸಮನ್ಸ್ ಅನ್ನು ನನ್ನ ವಿಳಾಸದ ಮನೆಯ ಬಾಗಿಲಿಗೆ ಅಂಟಿಸಿ ಜಾರಿ ಮಾಡಿದ್ದಾರೆ ಎಂದರೆ ನಾನು ಅಲ್ಲಿ ಬಾಡಿಗೆ ಮನೆ ಬಿಟ್ಟು ಮೂರು ವರ್ಷ ಆಗಿತ್ತು . ನಂತರ ಆ ಕೇಸಿನಲ್ಲಿ ನನ್ನ ವಿರುದ್ಧ ಎದುರುದಾರನ ಪರ ಡಿಕ್ರಿಯಾಗಿದೆ ಮತ್ತು ನನ್ನ ಚಿಕ್ಕಪ್ಪ ಎದುರುದಾರ ಅವನ ಹೆಸರಿಗೆ ಡಿಕ್ರಿಯಾದ ಮೇಲೆ ನ್ಯಾಯಾಲಯದ ನಿಯೋಗದಾರರ ಮೂಲಕ ಕ್ರಯ ಪತ್ರ ಮಾಡಿಸಿಕೊಂಡಿದ್ದಾನೆ ಎಂದರೆ ಹೌದು . ಆ ಕ್ರಯ ಪತ್ರ ದಿನಾಂಕ 22.09.2004 ರಲ್ಲಿ ಆಗಿದೆ ಎಂದರೆ ಹೌದು . ನಾನು ಹೊನ್ನಾವರಕ್ಕೆ ಬಂದಾಗ ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲನೆ ಮಾಡಿರುವುದಿಲ್ಲ.

5. ಅಸಲು ದಾವೆ 7/1997 ಅನ್ನು ಹೂಡುವುದಕ್ಕೆ ಮೊದಲು ಅದರ ವಾದಿ ಅಂದರೆ ನನ್ನ ಚಿಕ್ಕಪ್ಪ ನನಗೆ ವಕೀಲರ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದ ಎಂದರೆ ಸರಿಯಲ್ಲ. ನಾನು ಅದಕ್ಕೆ ನನ್ನ ವಕೀಲರಾದ ಆರ್ ಬಿ ಶಾನಭಾಗ್ ಮೂಲಕ ಅದಕ್ಕೆ ಉತ್ತರ ಕಳುಹಿಸಿದ್ದೇನೆ ಎಂದರೆ ಸಾಕ್ಷಿಯು ಆರ್ ಬಿ ಶಾನಭಾಗ್ ನನ್ನ ವಕೀಲರು ಅಲ್ಲ ನನ್ನ ವಕೀಲರು ವಿ ಜಿ ನಾಯ್ಕ ಎಂದು ನುಡಿಯುತ್ತಾರೆ . ಯಾವುದೇ ಕೇಸಿನಲ್ಲಿ ವಾದಿಗಳು ಮತ್ತು ಪ್ರತಿವಾದಿಗಳು ಗುರುತಿಸಿಕೊಂಡ ದಾಖಲಾತಿಗಳನ್ನು ನಿಶಾನೆ ಎಂದು ಗುರುತು ಮಾಡುತ್ತಾರೆ ಎಂದರೆ ಹೌದು . ಅಸಲು ದಾವೆ 32/2001 ರಲ್ಲಿ ನನ್ನ ಚಿಕ್ಕಪ್ಪ ವಾದಿ ನನಗೆ ನೀಡಿರುವ ತಿಳುವಳಿಕೆ ಪತ್ರವನ್ನು ಮತ್ತು ನಾನು ನೀಡಿರುವ ಜವಾಬು ಪತ್ರವನ್ನು ಅವನ ಪರ ನಿಶಾನೆ ಮಾಡಿಕೊಂಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಹಾಕಿದ ಮೇಲೆ ಅಸಲು ದಾವೆ 108/1995 ರಲ್ಲಿ ನಾನು ದಿನಾಂಕ 26.03.1997, 09.07.1997 ಮತ್ತು 08.12.1997 ರಂದು ಹೊನ್ನಾವರದ ನ್ಯಾಯಾಲಯದಲ್ಲಿ ಸಾಕ್ಷ್ಯ ನೀಡಿದ್ದೇನೆ ಎಂದರೆ ನಾನು ಪರಿಶೀಲನೆ ಮಾಡಬೇಕು . ಅದೇ ವೇಳೆಯಲ್ಲಿ ನಾನು ನನ್ನ ಎರಡು ಜನ ಚಿಕ್ಕಪ್ಪನ ವಿರುದ್ಧ

ಒಂದು ಫಿರ್ಯಾದನ್ನು ಹೊನ್ನಾವರ ನ್ಯಾಯಾಲಯದಲ್ಲಿ ದಾಖಲಿಸಿದ್ದೆ ಎಂದರೆ ಹೌದು . ಈ ದಾವೆ ದಾಖಲಾದ ಮೇಲೆ ನಾನು ಸಲ್ಲಿಸಿದ ಫಿರ್ಯಾದಿನಲ್ಲಿ ನಾನು ಸಾಕ್ಷ್ಯ ನೀಡಿದ್ದೇನೆ ಎಂದರೆ ಹೌದು . ನನಗೆ ಸಮನ್ಸ್ ಜಾರಿಯಾಗಿದ್ದರೂ ನಾನು ಉದ್ದೇಶಪೂರ್ವಕವಾಗಿ ವಕೀಲರ ಮೂಲಕ ಹಾಜರಾದ ಮೇಲೆ ಕೇಸನ್ನು ನಡೆಸಿಲ್ಲ ಮತ್ತು ಹಾಜರಾಗಿಲ್ಲ ಮತ್ತು ವಕೀಲರಿಗೆ ನಾನು ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ನಿಶ್ಕಾಳಜಿ ಕಾರಣ ಆ ದಾವೆ ನನ್ನ ವಿರುದ್ಧ ಆದೇಶವಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಭಟ್ಕಳ ತಾಲೂಕಿನ ಶಿರಾಲಿ ಗ್ರಾಮದಲ್ಲಿ ಇವೆ ಎಂದರೆ ಹೌದು . ಹೊನ್ನಾವರದಿಂದ 35 ಕಿ.ಮೀ. ದೂರದಲ್ಲಿ ಇದೆ ಎಂದರೆ ಹೌದು . ನಾನು ಶಿರಸಿಗೆ , ದುಬೈಗೆ , ಸೌದಿ ಅರೆಬಿಯಾಗೆ , ಪೂಣೆಗೆ ಮತ್ತು ಮುಂಬೈಗೆ ಹೋದಾಗ ದಾವಾ ಆಸ್ತಿಯನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂದರೆ ನನ್ನ ಸಂಬಂಧಿ ಪ್ರಭು ಎನ್ನುವವರು ನೋಡಿಕೊಳ್ಳುತ್ತಿದ್ದರು . ಅವರು ಮಾಸ್ತರ್ ಆಗಿದ್ದರು . ಈಗ ಅವರು ಜೀವಂತ ಇಲ್ಲ. ಎದುರುದಾರನೇ ದಾವಾ ಆಸ್ತಿಯನ್ನು ಉಳುಮೆ ಮಾಡಿದ್ದಾನೆ ಮತ್ತು ಅಭಿವೃದ್ಧಿ ಮಾಡಿದ್ದಾನೆ ಮತ್ತು ಅವನೇ ಕಬ್ಜೆ ವಹಿವಾಟು ಮಾಡಿದ್ದಾನೆ ಎಂದರೆ ಸುಳ್ಳು . ಎಲ್ಲಾ ವಿಚಾರ ಗೊತ್ತಿದ್ದರೂ ಈಗ ಸಾಧ್ಯವಿದ್ದರೆ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಸುಳ್ಳು ಮೇಲ್ಮನವಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಮೇಲ್ಮನವಿ ಹಾಕಲು ತಡ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ